ಕೆಲಸವೇ ಅಲ್ಲವೇ? ವಿಮರ್ಶೆ ಕೂಡ ಅನುವಾದದಂಥದೇ ಕೆಲಸ. ನನ್ನದಲ್ಲದ ಮನಸ್ಸು ನನ್ನ ಸುತ್ತಲೂ ಇರುವ ಲೋಕವನ್ನು ನೋಡುತ್ತ ನನಗೂ ಗೊತ್ತಿರುವ ಭಾಷೆಯಲ್ಲೇ ಕಟ್ಟಿಕೊಡುತ್ತ, ಹೊಸತೇನನ್ನೋ ಕಾಣುವಂತೆ ಮಾಡುತ್ತದಲ್ಲಾ ಅದನ್ನು ಅರ್ಥ ಮಾಡಿಕೊಳ್ಳುವ ಕೆಲಸ ಸಾಹಿತ್ಯ ವಿಮರ್ಶೆ. ನಮ್ಮ ನೋಟದ ಕೋನ ಹೇಗೆ ಬದಲಾಯಿತು ಅನ್ನುವುದನ್ನು ಕಂಡು ಕೊಳ್ಳುವ ಕೆಲಸ. ಹಾಗೆ ನೋಡಿದರೆ 'ಅರ್ಥ' ಮಾಡಿಕೊಳ್ಳುವ ಎಲ್ಲ ಕ್ರಿಯೆಗಳೂ ಅನುವಾದವೇ, ವಿಮರ್ಶೆಯೇ ಆಗಿರುತ್ತವೆ. ವಿಮರ್ಶೆ ಮಾಡುವಾಗ ನುಸುಳಬಹುದಾದ ಅಹಂಕಾರವನ್ನು ಅನುವಾದದ ಕೆಲಸ ಕಳೆದುಬಿಡುತ್ತದೆ.

**◆ ಕನ್ನಡಕ್ಕೆ ಪರಿಚಿತವಾದ ಕೃತಿಗಳನ್ನು ಅನುವಾದ ಮಾಡಿರುವಷ್ಟೇ, ಅಪರಿಚಿತವಾದ ಕೃತಿಗಳನ್ನೂ ಮಾಡಿದ್ದೀರಿ. ಅನುವಾದಿಸುವಾಗ ಬಳಸುವ ಭಾಷೆಯ ಬಳಕೆಯಲ್ಲಿ ನೀವು ಒಂದು ಮಾದರಿಯಾಗಿದ್ದೀರಿ ಅನಿಸುತ್ತಿದೆ. ಇದೆಲ್ಲ ಹೇಗೆ ಸಾಧ್ಯವಾಯಿತು?**

ಅನುವಾದಕ್ಕೆ ನಾನು ಆಯ್ಕೆ ಮಾಡಿಕೊಂಡಿರುವ ಕೃತಿಗಳನ್ನು ಗಮನಿಸಿದರೆ, ಅವು ನಮ್ಮ ವಿದ್ಯಾಭ್ಯಾಸದಲ್ಲಿ ಪರಿಚಯವಾಗುವ ಅಮೆರಿಕ ಮತ್ತು ಇಂಗ್ಲೆಂಡಿನ ಲೇಖಕರ ಕೃತಿಗಳಲ್ಲ. ಯುರೋಪು, ಟರ್ಕಿ, ದಕ್ಷಿಣ ಅಮೆರಿಕ, ಆಫ್ರಿಕಾ, ಸೂಫಿ ಮತ್ತು ಭಕ್ತಿ ಪರಂಪರೆಯ ಕೃತಿಗಳೇ ಆಗಿವೆ ಮತ್ತು ನನಗೆ ಪ್ರಿಯವಾದ ಕವಿತೆ, ಕಥೆ, ಕಾದಂಬರಿ, ನಾಟಕ, ತತ್ವಶಾಸ್ತ್ರ, ಚರಿತ್ರೆ, ಸಮಾಜ, ಸಂಸ್ಕೃತಿ ಚಿಂತನೆಯ ಕೃತಿಗಳಾಗಿವೆ ಅನ್ನುವುದು ನಿಮ್ಮ ಗಮನಕ್ಕೆ ಬಂದೇ ಬರುತ್ತದೆ. ಇಂಗ್ಲಿಷ್ ಮೂಲಕ ಕನ್ನಡಕ್ಕೆ ತಂದುಕೊಂಡಿರುವುದು ಹೆಚ್ಚು, ಕನ್ನಡದಿಂದ ಇಂಗ್ಲಿಷ್‌ಗೆ ಮಾಡಿರುವುದು ಕಡಿಮೆ. ಕನ್ನಡ ನನ್ನ ಭಾಷೆ ಅನ್ನುವ ವಿಶ್ವಾಸದಲ್ಲಿ ಪ್ರಯೋಗಕ್ಕೆ ತೊಡಗುವ ಹಾಗೆ, ಕಲಿತ ಭಾಷೆಯಲ್ಲಿ ಪ್ರಯೋಗಕ್ಕೆ ತೊಡಗಲು ಹಿಂಜರಿಕೆ ಇರುವುದು ಈ ವ್ಯತ್ಯಾಸಕ್ಕೆ ಮುಖ್ಯ ಕಾರಣ. ಎಳವೆಯಲ್ಲಿ ಅನುವಾದಗಳ ಮೂಲಕ ನನ್ನ ಮನಸ್ಸು, ಬದುಕು ಹಿಗ್ಗಿದ ಹಾಗೆ ಕನ್ನಡವನ್ನು ಮಾತ್ರ ಬಲ್ಲ ಎಳೆಯ ಮನಸ್ಸುಗಳು ಹಿಗ್ಗುವ ಹಾಗೆ ಸಮರ್ಥವಾದ ಕನ್ನಡದಲ್ಲಿ ನನ್ನ ಆಸಕ್ತಿಯ ಪುಸ್ತಕಗಳು ಬರಬೇಕು ಅನ್ನುವುದೂ ಇನ್ನೊಂದು ಕಾರಣ.

ಕೊನೆಯದಾಗಿ ಒಂದು ಗುಟ್ಟಾದ ಆಸೆ– ನನ್ನ ಅನುವಾದಗಳ ಮೂಲಕ ಎಳೆಯ ಲೇಖಕರು ಹೊಸ ಕಥಾವಸ್ತು, ಹೊಸ ನೋಟದ ನಿರೂಪಣೆ, ನುಡಿಬಳಕೆ ಕಲಿತಾರು ಅನ್ನುವ ಆಸೆ. ಅದು ನಿಜವಾಗಿದೆಯೋ, ಆಗುತ್ತದೆಯೋ ನನಗಂತೂ ಗೊತ್ತಿಲ್ಲ. ಹೀಗಾಗಿ ಅನುವಾದಗಳಲ್ಲಿ ವೈವಿಧ್ಯ ಬಂದಿದೆ. ಆದರೂ ನಾನಂದುಕೊಂಡಷ್ಟು ಬೇರೆ ಬೇರೆ ಥರಗಳಲ್ಲಿ ಗದ್ಯವನ್ನು ಬಳಸಲು ಆಗಿದೆಯೋ ಅನ್ನುವುದು ಕೂಡ ನನಗೆ ತಿಳಿದಿಲ್ಲ. ಅದು ಆದರ್ಶವಾಗಿ ಇದೆ, ಅಷ್ಟೇ.



ಬೇರೆಯ ದೇಶದ ಬದುಕನ್ನು ನನ್ನದಲ್ಲದ ಬೇರೆಯ ಮನಸ್ಸು, ನುಡಿಗಳ ಮೂಲಕ ನೋಡುತ್ತ ಆ ಮನಸ್ಸಿನ ನುಡಿ ಕನ್ನಡವಾದರೆ ಹೇಗಿರುತ್ತದೆಂದು ಊಹಿಸುತ್ತ ಬರೆಯುವುದು ಅದೊಂದು ರೋಚಕವಾದ, ಯಾವತ್ತೂ ಅಪೂರ್ಣವಾಗಿಯೇ ಉಳಿಯುವ ಕೆಲಸ.

**◆ 'ವಿಮರ್ಶೆಯ ಪರಿಭಾಷೆ' ಕೃತಿ ರಚನೆ ಮಾಡಲು ಎಷ್ಟು ಸಮಯ ಹಿಡಿಯಿತು? ಅದನ್ನು ರಚನೆ ಮಾಡಬೇಕು ಎಂದು ಏಕೆ ಎನಿಸಿತು?**

'ವಿಮರ್ಶೆಯ ಪರಿಭಾಷೆ' ರಚನೆ ಮಾಡಲು ಹತ್ತು ವರ್ಷಗಳೇ ಬೇಕಾಯಿತು. ತಾರುಣ್ಯದ ಹುಮ್ಮಸ್ಸು ಇತ್ತು. ಸಾಧ್ಯವಾದಷ್ಟೂ